ಬಗರ್ ಹುಕುಂ ಸಾಗುವಳಿ ಅರ್ಜಿ ಸಲ್ಲಿಸಲು ಅವಕಾಶ

1787 (2398) ಶ್ರೀ ಲಕ್ಷ್ಮಿ ನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಗರ್ ಹುಕುಂ ಸಾಗುವಳಿ ಅಕ್ರಮ-ಸಕ್ರಮ ಯಾವಾಗಿನಿಂದ ಜಾರಿಗೆ ಬಂದಿತು;

ಆ) ಅಕ್ರಮಸಕ್ರಮ ಮಾಡಲು ಸರ್ಕಾರಕ್ಕೆ ಅರ್ಜಿ ಹಾಕಲು ರೈತರಿಂದ ಎಲ್ಲಿಯವರೆಗೆ ಅರ್ಜಿ ಸ್ವೀಕರಿಸಲಾಯಿತು.

ಇ) ಹಲವಾರು ಕಾರಣಗಳಿಂದ ಅರ್ಜಿ ಸಲ್ಲಿಸಲು ಸಾಧ್ಯವಾಗದೆ ಜಮೀನನ್ನು ಒತ್ತುವರಿ ಮಾಡಿರುವ ರೈತರು ಪುನಃ ಸಲ್ಲಿಸಲು ಸಮಯ ನೀಡಲಾಗುವುದೆ.

ಈ) ಸಾವಿರಾರು ರೈತ ಕುಟುಂಬಕ್ಕೆ ಅನುಕೂಲವಾಗುವಂತೆ ನಿರ್ದಿಷ್ಟ ಸಮಯದೊಳಗೆ ಅರ್ಜಿ ಸಲ್ಲಿಸಲು ಪುನಃ ಅವಕಾಶ ಕಲ್ಪಿಸಿ ಆದೇಶ ಹೊರಡಿಸಲಾಗುವುದೆ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು)

ಅ) ಸರ್ಕಾರಿ ಜಮೀನಿನಲ್ಲಿ ಅನಧಿಕೃತ ಸಾಗುವಳಿ ಮಾಡುತ್ತಿರುವವರ ಜಮೀನು ಸಕ್ರಮಗೊಳಿಸುವ ಸಲುವಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ನಿಯಮ 94-ಎ ಅನ್ನು ದಿನಾಂಕ: 19.3.1991 ರಿಂದ ಜಾರಿಗೊಳಿಸಿದೆ. ಹಾಗೆಯೇ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ನಿಯಮ 94ಬಿ ಅನ್ನು 22-10-1998 ರಿಂದ ಜಾರಿಗೊಳಿಸಿದೆ.

ಆ) ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ನಿಯಮ 94-ಎ ಅನ್ವಯ ನಮೂನೆ 50ರ ಅರ್ಜಿಗಳನ್ನು ದಿನಾಂಕ: 19.9.91ರ ವರೆಗೆ ಸ್ವೀಕರಿಸಲು ನಿಗದಿಪಡಿಸಲಾಗಿದೆ. ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ನಿಯಮ 94-ಬಿ ಅನ್ವಯ ನಮೂನೆ 53ರ ಅರ್ಜಿಗಳನ್ನು ದಿನಾಂಕ: 30.4.99ರ ವರೆಗೆ ಸ್ವೀಕರಿಸಲು ಗಡುವು ನಿಗದಿಪಡಿಸಿದೆ.

ಇ) ಈ) ಸರ್ಕಾರದ ಪರಿಶೀಲನೆಯಲ್ಲಿದೆ.

ತುರುವೇಕೆರೆ ತಾಲ್ಲೂಕಿನ ಶ್ರೀ ಬಾಪೂಜಿ ಕೇಂದ್ರ ಪ್ರೌಢಶಾಲೆಗೆ ಸರ್ಕಾರಿ ಜಮೀನು ಮಂಜೂರಾತಿ

1788 (2399) ಶ್ರೀ ಲಕ್ಷ್ಮಿ ನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ದಂಡಿನಶಿವರ ಹೋಬಳಿ ಮಾಚೇನಳ್ಳಿಯಲ್ಲಿರುವ ಸಿದ್ಧಗಂಗಾ ವಿದ್ಯಾ ಸಂಸ್ಥೆಯ ಶ್ರೀ ಬಾಪೂಜಿ ಕೇಂದ್ರ ಪ್ರೌಢಶಾಲೆಗೆ ರಾಮಡಿಹಳ್ಳಿ ಸರ್ವೆ ನಂ. 30 ರಲ್ಲಿ 5 ಎಕರೆ 16 ಗುಂಟೆ ಜಮೀನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರಕ್ಕೆ ಬಂದಿರುವುದೆ;

ಆ) ದಿನಾಂಕ: 26.10.1999ರಲ್ಲಿ ವಿಭಾಗ ಅಧಿಕಾರಿಗಳ ಕಛೇರಿಯಿಂದ ಈ ಸಂಸ್ಥೆಗೆ ಜಮೀನು ಮಂಜೂರು ಮಾಡಲು ಶಿಫಾರಸ್ಸು ಬಂದಿದ್ದರೂ ಮಂಜೂರಾತಿ ನೀಡದಿರಲು ಕಾರಣವೇನು;

ಇ) ದೇಶದಲ್ಲಿ ಪ್ರಖ್ಯಾತಿ ಹೊಂದಿದ್ದು ಲಕ್ಷಾಂತರ ಮಕ್ಕಳಿಗೆ ಶಿಕ್ಷಣ ಹಾಗೂ ದಾಸೋಹ ಕೊಡುವ ಸಿದ್ಧಗಂಗಾ ವಿದ್ಯಾಸಂಸ್ಥೆಗೆ ತೊಂದರೆ ಮಾಡುತ್ತಿರುವ ಉದ್ದೇಶ ಏನು;

ಈ) ಸರ್ಕಾರ ಈಗಲಾದರೂ ಜಮೀನು ಮಂಜೂರು ಮಾಡುವುದೇ?